ಉ) ನೀರು ಬಿಡಲು ಸರ್ಕಾರದಿಂದ ಅಧಿಕೃತ ಆದೇಶ ಹೊರಡಿಸಿಲ್ಲ. ಆದರೆ, ಜನ ಜಾನುವಾರುಗಳ ಅನುಕೂಲಕ್ಕಾಗಿ ಕೆರೆಗೆ ನೀರನ್ನು ಬಿಡಲಾಗಿದ್ದು, ಸಿಲ್ ಲೆವೆಲ್‌ವರೆಗೆ 8 ಅಡಿ ನೀರು ಸಂಗ್ರಹಿಸಲಾಗಿದೆ.

ಊ) ಕೆರೆಗೆ ನೀರನ್ನು ಬಿಟ್ಟಿರುವುದರಿಂದ ರೈತರಿಗೆ ಹಾನಿಯ ಪ್ರಶ್ನೆ ಉದ್ಭವಿಸುವುದಿಲ್ಲ.

361 (904) ಶ್ರೀ ಸಿದ್ದು ಸವದಿ (ಜಮಖಂಡಿ): ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಹಿಪ್ಪರಗಿ ಅಣೆಕಟ್ಟಿನಲ್ಲಿ ಮುಳುಗಡೆಯಾಗಿರುವ ಹಳ್ಳಿಗಳಾವುವು; ಪ್ರತಿ ಹಳ್ಳಿಯಲ್ಲಿ ಎಷ್ಟು ಎಕರೆ ಜಮೀನು ಮುಳುಗಡೆಗೊಂಡಿದೆ: (ವಿವರ ನೀಡುವುದು);

ಆ) ಮುಳುಗಡೆಗೊಂಡಿರುವ ಜಮೀನುಗಳ ಸರ್ವೆ ಕಾರ್ಯ ಮುಗಿದಿದೆಯೇ;

ಇ) ಸರ್ವೆ ಮಾಡಿದರೂ ಹೆಚ್ಚು ಮುಳುಗಡೆಗೊಂಡ ಜಮೀನುಗಳಿಗೆ ಪರಿಹಾರ ನೀಡುವುದು ಯಾವಾಗ;

ಈ) ರಸ್ತೆಗಳು ಮುಳುಗಡೆಯಾಗಿದ್ದು, ಹಾಗೂ ನಡುಗಡ್ಡೆಗಳಾಗಿರುವುದು ಜಮೀನುಗಳ ರಸ್ತೆಗಳನ್ನು ಎತ್ತರಿಸಿ ಕೊಡುವುದು ಯಾವಾಗ; ಅಂತಹ ಜಮಖಂಡಿ ತಾಲ್ಲೂಕಿನಲ್ಲಿ ಬರುವ ರಸ್ತೆಗಳೆಷ್ಟು;

ಉ) ಹಿಪ್ಪರಗಿ ಅಣೆಕಟ್ಟು ಸಂತ್ರಸ್ತ ರೈತರಿಗೆ ಇಲ್ಲಿಯವರೆಗೆ ನೋಂದಣಿ ಶುಲ್ಕ ರಿಯಾಯಿತಿಯನ್ನು ಕೊಟ್ಟಿರುವುದಿಲ್ಲವೇಕೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಸಚಿವರು):

ಅ) ಹಿಪ್ಪರಗಿ ಅಣೆಕಟ್ಟಿನ ಅಡಿಯಲ್ಲಿ ಯಾವುದೇ ಜನವಸತಿ ಹಳ್ಳಿಗಳು ಮುಳುಗಡೆಯಾಗುವುದಿಲ್ಲ. ಆದರೆ ಈ ಯೋಜನೆಯಡಿಯಲ್ಲಿ 47 ಹಳ್ಳಿಗಳ ಜಮೀನು ಮುಳುಗಡೆಯಾಗಿದ್ದು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮುಳುಗಡೆ ಜಮೀನುಗಳ ಸರ್ವೆ ಕಾರ್ಯ ಮುಗಿದಿರುತ್ತದೆ.

ಇ) ಹೆಚ್ಚುವರಿ ಮುಳುಗಡೆಯಾಗಿರುವ ಜಮೀನುಗಳ ಸರ್ವೆ ಕಾರ್ಯವು ಮುಗಿದಿದ್ದು, ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಈ) ಮುಳುಗಡೆಯಾದ ರಸ್ತೆಗಳು ಹಾಗೂ ನಡುಗಡ್ಡೆಗಳಾಗಿರುವ ಜಮೀನುಗಳಿಗೆ ರಸ್ತೆ ಎತ್ತರಿಸುವಂತವು ಜಮಖಂಡಿ ತಾಲ್ಲೂಕಿನಲ್ಲಿ ಐದು ರಸ್ತೆಗಳು ಬರುತ್ತಿದ್ದು, ಅವುಗಳನ್ನು ಜೂನ್ 2005 ರೊಳಗಾಗಿ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉ) ಹಿಪ್ಪರಗಿ ಅಣೆಕಟ್ಟು ಸಂತ್ರಸ್ತ ರೈತರಿಗೆ ನೋಂದಣಿ ಶುಲ್ಕ ರಿಯಾಯಿತಿ ಕುರಿತು ವಿಷಯವು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಅನುಬಂಧ–I

ಹಿಪ್ಪರಗಿ ಅಣೆಕಟ್ಟು ಯೋಜನೆಯಡಿ ಮುಳುಗಡೆಯಾಗಲಿರುವ ಜಮೀನಿನ ವಿವರ

ಕ್ರ.ಸಂ.	ಹಳ್ಳಿಯ ಹೆಸರು	ಭೂಸ್ವಾಧೀನ ಪಡಿಸಿಕೊಳ್ಳಬೇಕಾದ ಜಮೀನಿನ ವಿವರ	
	ಅಥಣಿ ತಾಲ್ಲೂಕು		
		ಎಕರೆ	ಗುಂಟೆ
1	ನಂದೀಶ್ವರ	181	21
2	ಕೃಷ್ಣ ಕಿತ್ತೂರು	141	12
3	ನದಿ ಇಂಗಳಗಾಂವ್	55	30
4	ಬನಜವಾಡ	30	8
5	ಶೆಂಗುಣಷಿ	291	14
6	ತೀರ್ಥ	112	36
7	ಅವರಕೋಡ	119	18
8	ಸತ್ತಿ	103	3
9	ಉಗಾರ್ ಬಿ.ಕೆ.	10	23
10	ಕುಸನಾಲ್	23	33
11	ಕಶ್ರಾಳ	53	5
12	ಉಗಾರ್ ಕೆ.ಹೆಚ್	65	3
13	ಜನವಾಡ್	131	12
14	ತಂಗಡಿ	12	20
15	ಶಿನಾಳ	5	32
16	ಐನಾಪುರ	162	8
17	ಮಹೇಶ್‌ವಾಡಗಿ	118	5
18	ದರೂರು	86	36
19	ನಾಗನೂರ್ ಪಿ.ಕೆ	179	11
20	ಹಲ್ಯಾಳ್	42	3
21	ದೂದವಾಡ	147	15
22	ಸಪ್ತಸಾಗರ	102	23
23	ಕವಟಾಕೊಪ್ಪ	61	36
24	ಹುಳಗಬಾಳಿ	265	14
25	ಮೊಲವಾಡ	49	31
	ರಾಯಬಾಗ್ ತಾಲ್ಲೂಕು		
26	ಸವದತ್ತಿ	60	19
27	ಸಿದ್ದಾಪುರ	32.	26

28	ಖೆಮಾಲಾಪುರ	20	25
29	ಜಲಾಲ್‌ಪುರ	22	5 1/2
30	ಕುಡಚಿ	275	17
31	ಭಿರ್ಡಿ	38	19 1/2
32	ನಸಲಾಪುರ	10	3
33	ಗುಂಡವಾಡ	23	26
34	ಶಿರಗೂರು	57	36
35	ಚಿಂಚಳಿ	98	38
36	ದಿಗ್ಗೆವಾಡಿ	8	32 1/2
	ಜಮಖಂಡಿ ತಾಲ್ಲೂಕು		
37	ಕುಲಹಳ್ಳಿ	246	16
38	ಮದನಮಟ್ಟಿ	71	13
39	ಅಸಕಿ/ಆಸಂಗಿ	125	26
40	ತಮದಡ್ಡಿ	95	7
41	ಹಿಪ್ಪರಗಿ	123	13
42	ಹಳಿಂಗಳಿ	47	25
	ಚಿಕ್ಕೋಡಿ ತಾಲ್ಲೂಕು		
43	ಕಲ್ಲೋಳ	37	27
44	ಅಂಕಳಿ	14	32 1/2
45	ಇಂಗಳ	67	18 1/2
46	ಯಡೂತು	29	34 1/2
47	ಮಂಜರಿ	33	35 1/2
	ಒಟ್ಟು	**4099**	**27 1/2**

362 (609) ಶ್ರೀ ಸೋಮಲಿಂಗಪ್ಪ ಎಂ.ಎಸ್ (ಸಿರಗುಪ್ಪ): ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಟಿ.ಎಸ್.ಕಡ್ಲೂರು, ಕರೂರು ಕೋಳೂರು, ಏತ ನೀರಾವರಿ ಯೋಜನೆಗಳ ನಂ.6 ಕಾಲುವೆ ವಿಭಾಗ, ಪೂರ್ಣಗೊಳ್ಳದೇ ಇರುವುದಕ್ಕೆ ಕಾರಣಗಳೇನು?

ಆ) ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳು ಮಂಜೂರಾಗಿವೆ?

ಇ) ಪ್ರಗತಿಯಲ್ಲಿರುವ ಯೋಜನೆಗಳು ಯಾವುವು?

ಈ) ಸದರಿ ಏತ ನೀರಾವರಿ ಯೋಜನೆಗಳ ಕಾಮಗಾರಿಯ ಬಾಕಿ ಬಿಲ್ಲುಗಳನ್ನು ಪಾವತಿಸದಿರಲು ಕಾರಣಗಳೇನು? ಈ ಏತ ನೀರಾವರಿ ಯೋಜನೆಗಳು ಯಾವ ಪ್ರಗತಿ ಹಂತದಲ್ಲಿವೆ?

ಉ) ಈ ಏತ ನೀರಾವರಿ ಯೋಜನೆಗಳಿಗೆ ಒಟ್ಟು ಮಂಜೂರಾದ ಹಣವೆಷ್ಟು ಹಾಗೂ ಈಗ ಎಷ್ಟು ಖರ್ಚು ಮಾಡಲಾಗಿದೆ?